ಆ ಮಾರುಕಟ್ಟೆಯಲ್ಲಿ ಈ ಶರತ್ತನ್ನು ಉಲ್ಲಂಘನೆ ಮಾಡಿ ಮಾರುಕಟ್ಟೆಗೆ ಶುಲ್ಕವನ್ನು ಕಟ್ಟದೇ ಇರುವವರಿಗೂ ನಿವೇಶನವನ್ನು ಕೊಟ್ಟಿದ್ದಾರೆ. ಇಲ್ಲಿ ಯಾರಿಗೆ ಆದ್ಯತೆಯ ಮೇಲೆ ಕೊಡುತ್ತೇವೆಂದು ಹೇಳಿದ್ದಾರೋ ಅವರಿಗೆ ಕೊಡಲಿಲ್ಲ. ಆದುದರಿಂದ ಈ ಅಲಾಟ್‌ಮೆಂಟ್ ಅನ್ನು ರದ್ದು ಮಾಡಿ ಹೊಸದಾಗಿ ಕಾನೂನು ನಿಯಮಾವಳಿಯ ಪ್ರಕಾರ ಹಂಚುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತಹ ರೆಕಾರ್ಡ್‌ಗಳನ್ನು ತರಿಸಿ ನಾಳೆ ಬೆಳಿಗ್ಗೆ ಉತ್ತರ ಕೊಡುತ್ತೇನೆ.

ದ.ಕ. ಜಿಲ್ಲೆಯಲ್ಲಿ ನಡುತೋಪುಗಳನ್ನು ತೆಗೆದು ಹೂಳು ಎತ್ತುವಂತಹ ಕಾಮಗಾರಿ ಕೈಗೊಳ್ಳುವುದರ ಬಗ್ಗೆ

ಶ್ರೀ ಕೆ. ಜಯರಾಮ್ ಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವಂತಹ ನೇತ್ರಾವತಿ ನದಿಯೂ ಅರಬ್ಬಿ ಸಮುದ್ರವನ್ನು ನನ್ನ ಕ್ಷೇತ್ರದ ಮುಖಾಂತರ ಸೇರುತ್ತಿದೆ. ಒಂದು ಕಡೆ ಮಂಗಳೂರು ನಗರ ಪಾಲಿಕೆ ವತಿಯಲ್ಲಿ ಜಪ್ಪಿನಮೊಗರು ಗ್ರಾಮ ಮತ್ತು ಗ್ರಾಮಾಂತರ ಪ್ರದೇಶದ ಮುನ್ನೂರು ಮತ್ತು ಅಂಬ್ಲಮೊಗರು ಗ್ರಾಮದ ನಡುವಿನಲ್ಲಿ ಸುಮಾರು 10-15 ವರ್ಷಗಳಿಂದ ಮರಳು ತುಂಬಿ ಕುದುರಾಗಿ ಮಾರ್ಪಾಡಾಯಿತು. ಈಗ ಈ ಕುದುರು ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಗಾಳಿ ಮರಗಳನ್ನು ನೆಟ್ಟಿ ಸುಮಾರು 60 ರಿಂದ 75 ಎಕರೆಗಳ ನದಿ ಪ್ರದೇಶವೂ ಕುದುರಾಗಿ ಪರಿವರ್ತನೆಯಾಗಿದೆ. ಈ ಗಾಳಿ ಮರಗಳು ವರ್ಷೇವರ್ಷೆ ಇದರ ಗಾತ್ರ ಜಾಸ್ತಿಯಾಗುತ್ತಿದೆ. ಇದರ ಪರಿಣಾಮವಾಗಿ ಎರಡು ಕಡೆಗಳಲ್ಲೂ ಇರುವಂತಹ ಕೃಷಿ ಭೂಮಿ ನಷ್ಟವಾಗುತ್ತಿದೆ, ಮತ್ತೆ ನದಿ ಕೊರತವೂ ಆಗುತ್ತಿದೆ. ಜಪ್ಪಿನಮೊಗರು ಗ್ರಾಮದ ನದಿ ಬದಿಯಲ್ಲಿರುವಂತಹ ಮನೆಗಳು ಅಪಾಯದ ಅಂಚಿನಲ್ಲಿದೆ. ದಕ್ಷಿಣ ಕನ್ನಡ ಜಿಲ್ಲಾಪಂಚಾಯತ್ ಈಗಾಗಲೇ ರಾಜ್ಯಸರ್ಕಾರವನ್ನು ಈ ಗಾಳಿ ಮರಗಳನ್ನು ತೆಗೆಯುವಂಥಾದ್ದಕ್ಕೆ ಒತ್ತಾಯ ಮಾಡಿದೆ. ನಾನು ಅರಣ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೆನೆಂದರೆ ಅಲ್ಲಿರುವಂತಹ ಈ ನಡುತೋಪುಗಳನ್ನು ತೆಗೆದು ಹೂಳು ಎತ್ತುವಂತಹ ಕಾಮಗಾರಿಯನ್ನು ತೆಗೆದುಕೊಂಡು ಅಲ್ಲಿ ಜನರಿಗೆ ಮತ್ತು ಕೃಷಿ ಪ್ರದೇಶಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ಇನ್‌ಸ್ಪೆಕ್ಟ್ ಮಾಡಿ ಆದಷ್ಟು ಜಾಗ್ರತೆ ಏನು ಮಾಡಬೇಕೆಂಬ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸುವುದು

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಮತ್ತು ಸರ್ಕಾರಿ ಪ್ರೌಢಶಾಲೆಗಳ ಶಿಕ್ಷಕರ ಕೆಲವು ಸೌಲಭ್ಯಗಳನ್ನು ಕೊಡುವುದರಲ್ಲಿ

ತಾರತಮ್ಯ ಮಾಡುತ್ತಿದ್ದಾರೆ. ಶಿಕ್ಷಕರು ನಿವೃತ್ತಿಯಾಗುವಂತಹ ಕಾಲದಲ್ಲಿ ಗ್ರಾಚ್ಯುಟಿ ಕ್ಯಾಲ್‌ಕ್ಯುಲೇಷನ್ ಮಾಡುವಂತಹ ಸಂದರ್ಭದಲ್ಲಿ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಮೂಲ ವೇತನವನ್ನು ಕೊಡುತ್ತಾರೆ. ಆದರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಮೂಲ ವೇತನ ಪ್ಲಸ್ ಡಿ.ಎ.ಯನ್ನು ಕೊಡುತ್ತಿದ್ದಾರೆ. ಹೀಗಾಗಿ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಬಹಳ ಅನ್ಯಾಯವಾಗಿದೆ. ಅವರಿಗೆ ಗ್ರಾಚ್ಯುಟಿ ಫಿಕ್ಸ್ ಮಾಡುವಾಗ ಅನ್ಯಾಯವಾಗುತ್ತದೆ. ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವ ಟೀಚರುಗಳು ಸ್ವಯಂ ನಿವೃತ್ತಿಯನ್ನು 20 ವರ್ಷಗಳಾದ ಮೇಲೆ ತೆಗೆದುಕೊಳ್ಳಬಹುದು, ಅದೇ ಸರ್ಕಾರಿ ಶಾಲೆಗಳಲ್ಲಿ 15 ವರ್ಷ ಕೆಲಸ ಮಾಡಿರುವಂಥವರು ಸ್ವಯಂ ನಿವೃತ್ತಿಯನ್ನು ತೆಗೆದುಕೊಳ್ಳಬಹುದು. ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವಂಥವರು 28 ವರ್ಷಗಳಿಗೆ ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡರೆ ಅವರಿಗೆ ಐದು ಇನ್‌ಕ್ರಿಮೆಂಟ್ ಕೊಡುತ್ತಾರೆ. ಈ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರುಗಳಿಗೆ ಈ ಇನ್‌ಕ್ರಿಮೆಂಟ್ ಇರುವುದಿಲ್ಲ. ಇನ್ನು ಮೆಡಿಕಲ್ ಅಲೋಯನ್ಸ್, ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಮಾತ್ರ ಕೊಡುತ್ತಾರೆ. ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವವರಿಗೆ ಈ ಸೌಲಭ್ಯವಿಲ್ಲ. ಈ ವಿಚಾರಗಳ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ತಾನೇ ಇದು ನನ್ನ ಕೈ ಸೇರಿದೆ. ಇದರ ಬಗ್ಗೆ ಮಾಹಿತಿ ತರಿಸಿಕೊಂಡು ಉತ್ತರ ಕೊಡುತ್ತೇನೆ.

ಏಲಂನಲ್ಲಿ ಫಸಲು ಪಡೆದವರಿಗೆ ಬ್ಯಾಂಕಿನ ಸಾಲದ ಬಡ್ಡಿಯನ್ನು ಕಟ್ಟಲು ಕಾಲಾವಕಾಶ.

ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಕುಂದಾಪುರ ತಾಲ್ಲೂಕಿನಲ್ಲಿ ಗೇರು ಬೀಜದ ಮರಗಳನ್ನು, ಫಸಲನ್ನು ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮತ್ತು ಅರಣ್ಯ ಇಲಾಖೆಯವರು ಬೇರೆ ಬೇರೆಯಾಗಿ ಪ್ರತಿ ವರ್ಷ ಏಲಂ ಮಾಡಿ ಕೊಡುವುದು ನಡೆದುಕೊಂಡು ಬಂದಿದೆ. ಇದರಲ್ಲಿ ನಿರುದ್ಯೋಗಿ ಯುವಕರು ಮತ್ತು ಮಹಿಳೆಯರು ಬ್ಯಾಂಕ್ ಮತ್ತು ಇತರ ಸಂಸ್ಥೆಗಳಿಂದ ಸಾಲ ಪಡೆದು ಏಲಂನಲ್ಲಿ ಫಸಲು ಪಡೆದು ವ್ಯಾಪಾರವನ್ನು ಮಾಡಿಕೊಂಡು ಜೀವನ ನಿರ್ವಹಣೆಯ ದಾರಿಯನ್ನು ನೋಡಿಕೊಂಡಿದ್ದಾರೆ. 1997-98ರಲ್ಲಿ ಏಲಂವಾರು ನಡೆಸಿ ಅದರ ಮೊತ್ತ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಉಳಿದಿದೆ. ಆದರೆ ಈ ವರ್ಷ ಪ್ರಕೃತಿ ವೈಪರಿತ್ಯದಿಂದ ಮಾವು, ಹಲಸು, ಮತ್ತು ಗೇರುಗಳಲ್ಲಿ ಹೂ ಮೂಡಲಿಲ್ಲ, ಮತ್ತು ಫಸಲು ಬರಲಿಲ್ಲ. ಈ ರೀತಿಯಾಗಿ ಶೇ.5ರಷ್ಟು ಫಸಲು ಬಾರದೆ ಇರುವಂತಹ ಸ್ಥಿತಿಯಲ್ಲಿ ಜನರು ಕಂಗಾಲಾಗಿದ್ದಾರೆ. ಇದು ಕುಂದಾಪುರ ತಾಲ್ಲೂಕಿಗೆ ಮಾತ್ರವಲ್ಲ. ಮಲೆನಾಡಿನ ಇತರ ಭಾಗಗಳಿಗೂ ಅನ್ಯಾಯವಾಗುತ್ತಿದೆ. ಈಗ ಅವರು ಗೋಳು ಏನೆಂದರೆ ಅವರು ಹಾಕಿದಂತಹ ದುಡ್ಡು ವಾಪಸ್ಸು ಬರುವುದಿಲ್ಲ ಮತ್ತು ಫಲವೂ ಸಿಗುವುದಿಲ್ಲ. ಇವರು ಮುಂದೆ ಬ್ಯಾಂಕ್ ಲೋನ್ ಕಟ್ಟಬೇಕು ಮತ್ತು ಇಲ್ಲಿಯೂ ಬೀದರ್ ಪರಿಸ್ಥಿತಿ ಬಂದರೆ ಆಶ್ಚರ್ಯವೇನೂ ಇಲ್ಲ. ಅದಕ್ಕಾಗಿ ನಾನು ಸರ್ಕಾರದಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ